ಯಥಾಪ್ರಕಾರವಾಗಿ ರಾತ್ರಿಯ ಒಂದೊತ್ತಿನಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಂಬತ್ತೈದು ವರ್ಷ ವಯಸ್ಸಿನ ಮೇಗಳ ಮನೆಯ ಕರಿಯನುಮಪ್ಪ ಉರೂಫ್ ಜಟಾಯುವಿಗೆ ಎಚ್ಚರವಾದಾಗ ಗಂಟಲು ಉಬ್ಬೆಗೆ ಹಾಕಿದ ಗುಡಾಣದಂತಾಗಿತ್ತು. ಮಾಮೂಲಿಯಾಗಿ ಕೈ ನೀರಿನ ತಂಬಿಗೆಗೆ ತಡಕಾಡಿತ್ತು. ಈ ಮೂರು ವರ್ಷಗಳಿಂದಲೂ ಮನೆಯ ಮುಂದಿನ ಜೋಪಡಿಯ ಜಗುಲಿಯ ಮೇಲೆ ಮಲಗುವ ಕರಿಯನುಮಪ್ಪನ ದಿಂಬಿನ ಪಕ್ಕದಲ್ಲಿ ಸೊಸೆ ಅನುಸೂಯಮ್ಮ ತಪ್ಪದೆ ಸಣ್ಣ ಸ್ಟೀಲು ತಂಬಿಗೆಯ ತುಂಬಾ ನೀರು ಇಟ್ಟು ಪ್ಲೇಟು ಮುಚ್ಚುತ್ತಾಳೆ. ಕರಿಯನುಮಪ್ಪನಿಗೆ ಪ್ರತಿನಿತ್ಯವೂ ಸರಿಹೊತ್ತು ಮೀರಿದ ನಂತರ ಯಾವುದಾದರೊಂದು ಗಳಿಗೆಯಲ್ಲಿ ಎಚ್ಚರವಾಗುವುದು ಗ್ಯಾರಂಟಿ. ಆಗ ಪೂರ್ತಿ ತಂಬಿಗೆಯ ನೀರನ್ನು ಗಟಗಟ ಕುಡಿದು ಜೋಪಡಿಗೆ ಅಂಟಿಕೊಂಡಂತಿರುವ ಬಚ್ಚಲಿಗೆ ನಿಧಾನವಾಗಿ ನಡೆದುಕೊಂಡು ಹೋಗಿ ಮೂತ್ರ ವಿಸರ್ಜನೆ ಮಾಡಿ ಬಂದು ಮಲಗಿದರೆ ಬೆಳಿಗ್ಗೆ ಸೊಸೆ ಕಾಫಿಗೆಂದು ಕೂಗಿದಾಗಲೇ ಎಚ್ಚರವಾಗುತ್ತಿದ್ದದ್ದು. ತಿಂದುಂಡು ಗಟ್ಟಿಯಾಗಿಯೇ ಊರ ತುಂಬಾ ಓಡಾಡಿಕೊಂಡಿದ್ದ ಕರಿಯನುಮಪ್ಪನ ಕಾಲುಗಳು ಮೂರು ವರ್ಷಗಳಿಂದೀಚೆಗೆ ಸತುವು ಕಳೆದುಕೊಂಡಿದ್ದವಲ್ಲದೆ ದೃಷ್ಟಿಯೂ ಮಬ್ಬುಮಬ್ಬಾಗಿತ್ತು. ಮಗ ಎಮ್ಕೆಗಾಂಧಿಯು ತುಮಕೂರಿನ ಗೌರ್ಮೆಂಟ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ. ಡಾಕ್ಟರು ಕರಿಯನುಮಪ್ಪನ ಎದೆಯ ಮೇಲೆ ಒಂದೇ ಒಂದು ಸೆಕೆಂಡು ಸ್ಟೆತೋಸ್ಕೋಪು ಇಟ್ಟು 'ಒಣಗಿದ ಮರವ ಚಿಗುರೊಡ್ಸೋಕೆ ಸಾಕ್ಷಾತ್ ಆ ಪರಮಾತ್ಮನಿಂದ್ಲೂ ಸಾಧ್ಯವಿಲ್ಲ. ಶುಗರ್ರು ಬಂದಂಗೈತೆ. ಎರ್ಡೊತ್ತು ಒಂದೊಂದ್ ಮುದ್ದೆ ತಿಂದ್ಕಂಡು, ಒಂದೊಂದು ಶುಗರ್ ಮಾತ್ರೆ ತಗಂಡು ಓಡಾಡ್ಕಂಡಿದ್ರೆ ಇನ್ನೂ ಏಳೆಂಟೊರ್ಷ ಯಮಧರ್ಮರಾಯ ನಿಮ್ಮಪ್ಪನ ತಂಟೆಗೆ ಬರಲ್ಲ...' ಎಂದು ನಗುತ್ತಾ ಎಮ್ಕೆಗಾಂಧಿಯು ಕೊಟ್ಟ ನೂರು ರೂಪಾಯಿ ನೋಟನ್ನು ಜೇಬಿಗಿಳಿಸಿ ಒಂದಿಡಿ ಪೂರ್ತಿ ಸಣ್ಣ ಸಣ್ಣ ಮಾತ್ರೆಗಳನ್ನು ಪೊಟ್ಟಣ ಕಟ್ಟಿಕೊಟ್ಟಿದ್ದರು. ಅಂದಿನಿಂದ ಕರಿಯನುಮಪ್ಪ ಬೆಳಿಗ್ಗೆ, ರಾತ್ರಿ ಒಂದೊಂದು ಮುದ್ದೆ ಬಿಸಿ ಬಿಸಿ ಹಿಟ್ಟುಂಡು ಒಂದೊಂದು ಗುಳಿಗೆಯನ್ನು ಬಾಯಿಗೆಸೆದುಕೊಂಡು ನೀರು ಕುಡಿಯುತ್ತಿದ್ದ.

ಅಂತಾನಿಂತು ಕರಿಯನುಮಪ್ಪನಿಗೆ ಇವೊತ್ತು ರಾತ್ರಿ ಎಚ್ಚರವಾಗಿ ತಡಕಾಡಿದಾಗ ನೀರಿನ ತಂಬಿಗೆ ಕೈಗೆಟುಕಿರಲಿಲ್ಲ. ಸೊಸೆಯೇನಾದರೂ ಗಡಿಬಿಡಿಯಲ್ಲಿ ರಾತ್ರಿ ತಂಬಿಗೆ ಇಟ್ಟಿರುವುದು ಮರೆತಿರಬೇಕೆಂದುಕೊಂಡು ಬಾಯಾರಿಕೆ ತಡಯಲಾರದೆ 'ಅಮ್ಮಯ್ಯ ಅನ್ಸೂಯಮ್ಮ...' ಎಂದು ಗೊಗ್ಗರು ಧ್ವನಿಯಲ್ಲಿ ಕೂಗಿ ಕರೆದಿದ್ದ. ಬೆಕ್ಕು ಓಡಾಡಿದರೂ ಎಚ್ಚರಗೊಳ್ಳುವ ಸೊಸೆ ಮಾವನ ಕೂಗಿಗೆ ಎದ್ದು ಲೈಟ್ ಹಾಕಿ 'ಯಾಕ್ಮಾಮ ಏನ್ಬೇಕು...' ಎಂದು ಕಣ್ಣೊಸಗಿಕೊಂಡು ಜಗುಲಿಯ ಹತ್ತಿರ ಬಂದು ನಿಂತಿದ್ದಳು. 'ನೀರಿನ ತಂಬ್ಗೆ ಕಾಣ್ತ ಇಲ್ವಲ್ಲಮ್ಮಯ್ಯ, ರಾತ್ರಿ ಇಡೋದು ಮರ್ತ್ಗಿರ್ತೇನು...' ಎಂದ ಮಾವನ ಮಾತಿಗೆ 'ಅಯ್ಯೊ ಇಟ್ಟಿದ್ನಲ್ಲ ಮಾಮ. ಎಲ್ಲೊ ನಿಮ್ಮಗ ವಿಸ್ಕಿಗೆ ಬೆರ್ಸ್ಕಂಬೋಕೆ ಎತ್ಕಂಡ್ ಹೋಗಿರ್ಬೇಕು. ಬರೋ ಆಯಿತ್ವಾರ ಅದೆಂಥಾದ್ದೊ ಬೈ ಎಲೆಕ್ಷನ್ ಐತಂತೆ. ರಾತ್ರಿ ಹನುಮಂತಪುರದ ಹಳೆ ಪಾರ್ಟಿ ಸಣ್ಣತಿಮ್ಮಯ್ಯ ಬೇರೆ ಬಂದಿದ್ದ. ದುಡ್ಗಿಡ್ ಹಂಚಿರ್ಬೇಕು. ಕಾಡಿಬೇಡಿ ನಿಮ್ಮಗ ಒಂದು ಬಕೀಟು ಮೊಟ್ಟೆಪಲ್ಯ ಬೇರೆ